# ಕರ್ನಾಟಕ ಸರ್ಕಾರ
# ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ -581110

ದೂರವಾಣಿ : 08375-249033
ಇ-ಮೇಲ್ – zphaveri@gmail.com ಫ್ಯಾಕ್ಸ : 08375-249037

ಕ್ರಸಂ:ಹಾಜಿಪಂ/ಅಭಿ-2/ಇ-ಪಂಚಾಯತ/ಹೊ.ಗು/ವಹಿ-/2025-26 ದಿನಾಂಕ: 12-06-2025.

## :: ಪತ್ರಿಕಾ ಪ್ರಕಟಣೆ ::

ವಿಷಯ : ಜಿಲ್ಲಾ ಪಂಚಾಯತ ಕಾರ್ಯಾಲಯ ಹಾವೇರಿ ಇಲ್ಲಿ ಖಾಲಿ ಇರುವ ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರು (ADPMU) ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ : 1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/36/ಇ-ಆಡಳಿತ/2020 ದಿನಾಂಕ: 01-12-2020.
2) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/96/ಇ-ಆಡಳಿತ/2022 ದಿನಾಂಕ: 10-09-2023.

* * * *

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಗ್ರಾಮ ಸ್ವರಾಜ್ ಅಭಿಯಾನ ಯೋಜನೆಯ ಇ-ಪಂಚಾಯತ ಕಾರ್ಯಕ್ರಮದಡಿ ಇ-ಗ್ರಾಮ ಸ್ವರಾಜ್, GPDP, Action Soft, Mission Antyodaya, Local Government Directory (LGD), Svamitva, Vibrant Sabha, PFMS ಮತ್ತು ಇತರೆ ತಂತ್ರಾಂಶಗಳನ್ನು ಹಾಗೂ ರಾಜ್ಯ ಸರ್ಕಾರದ ಪಂಚತಂತ್ರ, ಪಂಚತಂತ್ರ 2.0, ಗಾಂಧಿ ಸಾಕ್ಷಿ ಕಾಯಕ, ಗಾಂಧಿ ಸಾಕ್ಷಿ ಕಾಯಕ 2.0, ಇ-ಬೆಳಕು, ಇ-ಆಫೀಸ್, ಇ-ಸ್ವತ್ತು, iPGRS ಮುಂತಾದ ತಂತ್ರಾಂಶಗಳನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರು(ADPM) -01 ಹುದ್ದೆಯು ಹಾವೇರಿ ಜಿಲ್ಲಾ ಪಂಚಾಯತ ಕಾರ್ಯಾಲಯದಲ್ಲಿ ಖಾಲಿ ಇದ್ದು, ಸದರಿ ಹುದ್ದೆಗೆ ಕಾರ್ಯದಕ್ಷತೆ ಮತ್ತು ಸಾಮರ್ಥ್ಯದ ಮೇರೆಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆಯಲು ಸರ್ಕಾರದಿಂದ ಮಾರ್ಗಸೂಚಿಗಳನ್ನು ನೀಡಿದ್ದು, ಅದರಂತೆ ಈ ಕೆಳಕಂಡ ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ | ಹುದ್ದೆಯ ಹೆಸರು | ವಿದ್ಯಾರ್ಹತೆಗಳು | ಹುದ್ದೆ ಸಂಖ್ಯೆ | ಮಾಸಿಕ ವೇತನ | ಅನುಭವ | ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕ & ಆನ್ ಲೈನ್ ವೆಬ್ ಸೈಟ್ ವಿಳಾಸ | ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ದಿನಾಂಕ ಮತ್ತು ಸಮಯ |
|---|---|---|---|---|---|---|---|
| 01 | ಸಹಾಯಕ ಜಿಲ್ಲಾ ಯೋಜನಾ ವ್ಯವಸ್ಥಾಪಕರು (ADPM) | **BE (C.S/E & C/LS) / MCA / BCA** | 01 | 30000/- | ಕನಿಷ್ಠ 2 ವರ್ಷ | ದಿ: 16-06-2025 ರಿಂದ 30-06-2025 ರ ವರೆಗೆ https://haveri.nic.in | ದಿ: 10-07-2025 ರಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ವರೆಗೆ. ಸ್ಥಳ: ಜಿಲ್ಲಾ ಪಂಚಾಯತ ಕಾರ್ಯಾಲಯ, ಹಾವೇರಿ |

**ವಿಶೇಷ ಸೂಚನೆ :**

1) ಆನ್ ಲೈನ್ ಮೂಲಕ ಮಾತ್ರ **https://haveri.nic.in /Website** ನಲ್ಲಿ ಅರ್ಜಿಯನ್ನು ಸಲ್ಲಿಸುವುದು.
2) **ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 16-06-2025. ಮುಕ್ತಾಯ ದಿನಾಂಕ : 30-06-2025.**
3) ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಮೂದಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ದಾಖಲಾತಿ ಪರಿಶೀಲನೆ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.
4) ಮೂಲ ದಾಖಲೆಗಳನ್ನು ಪರಿಶೀಲಿಸಲು ನಿಗದಿಪಡಿಸಿರುವ ದಿನಾಂಕ: 10-07-2025 ರಂದು ಸಂಜೆ 5.00 ರೊಳಗಾಗಿ ಹಾಜರಾಗುವ ಅಭ್ಯರ್ಥಿಗಳ ದಾಖಲೆಗಳನ್ನು ಮಾತ್ರ ಪರಿಶೀಲಿಸಲಾಗುವುದು.

5) ಸಂಬಂಧಪಟ್ಟ ವಿಷಯದಲ್ಲಿ ಪದವಿ ಹೊಂದಿದ ಅಭ್ಯರ್ಥಿಗಳಿಗೆ ಮೊದಲ ಆದ್ಯತೆ ನೀಡಲಾಗುವುದು.
6) ಮೂಲ ದಾಖಲೆಗಳನ್ನು ಪರಿಶೀಲಿಸವ ದಿನಾಂಕದ ಬಗ್ಗೆ ಅಭ್ಯರ್ಥಿಗಳಿಗೆ ಪತ್ರಿಕಾ ಪ್ರಕಟಣೆಯಲ್ಲಿ ನಿಗಧಿಪಡಿಸಿದ ದಿನಾಂಕವೇ ಅಂತಿಮವಾಗಿರುತ್ತದೆ.
7) 40 ವರ್ಷ ಮೇಲ್ಪಟ್ಟವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
8) ದಾಖಲಾತಿ ಪರಿಶೀಲನೆಯಲ್ಲಿ ಅರ್ಹಗೊಂಡ ಅಭ್ಯರ್ಥಿಗಳನ್ನು ವಿದ್ಯಾರ್ಹತೆಯಲ್ಲಿ ಹೊಂದಿದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ, ಸದರಿ ಪಟ್ಟಿಯಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಹುದ್ದೆಗೆ ಆಯ್ಕೆ ಮಾಡಲಾಗುವುದು. (ಸರ್ಕಾರದಿಂದ ನಿಗದಿಪಡಿಸಿರುವ ಎಲ್ಲಾ ಮಾರ್ಗಸೂಚಿಗಳನ್ವಯ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುವುದು)
9) ಹುದ್ದೆಗೆ ಆಯ್ಕೆ ಮಾಡಲಾದ ಅಭ್ಯರ್ಥಿಗಳು ನಿಯೋಜಿಸಿದ ಸ್ಥಳಕ್ಕೆ 07 ದಿನಗಳೊಳಗಾಗಿ ಹಾಜರಾಗದಿದ್ದಲ್ಲಿ ಅರ್ಹತಾ ಪಟ್ಟಿಯಲ್ಲಿನ ನಂತರದ ಅಭ್ಯರ್ಥಿಯನ್ನು ಆಯ್ಕೆಗೆ ಪರಿಗಣಿಸಲಾಗುವುದು.
10) ಆನ್ ಲೈನ್ ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡತಕ್ಕದ್ದು.
11) ಅರ್ಜಿಯೊಂದಿಗೆ ಲಗತ್ತಿಸಬೇಕಾದ (ಅಪ್ ಲೋಡ್ ಮಾಡಬೇಕಾದ) ದಾಖಲೆಗಳು.

(ಅ) ಅಭ್ಯರ್ಥಿಯ ಸಹಿಯೊಂದಿಗೆ ದೃಢೀಕರಿಸಿದ ಇತ್ತೀಚಿನ ಭಾವಚಿತ್ರ (In JPG Formate)
(ಆ) ಎಸ್. ಎಸ್. ಎಲ್. ಸಿ., ಅಂಕಪಟ್ಟಿ (IN Pdf File)
(ಇ) ಶೈಕ್ಷಣಿಕ ವಿದ್ಯಾರ್ಹತೆಯ ಎಲ್ಲ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳ ಪ್ರತಿ (In Pdf File)
(ಈ) ಕಾರ್ಯಕ್ಷೇತ್ರದಲ್ಲಿ ಅನುಭವ ಹೊಂದಿರುವ ಪ್ರಮಾಣ ಪತ್ರ. (In Pdf File)

12) ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಸೇವೆ ಪಡೆಯಲು ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ.
13) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸರ್ಕಾರದಿಂದ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.
14) ಮೆರಿಟ್ ಮೇಲೆ ಆಯ್ಕೆಯಾದ ಅಭ್ಯರ್ಥಿಗಳ ಸೇವೆಯನ್ನು ಜಿಲ್ಲೆಯಲ್ಲಿ ಅನುಮೋದಿತ ಮಾನವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಸೇವೆ ಪಡೆದುಕೊಳ್ಳಲಾಗುವುದು.
15) ಹೊರಗುತ್ತಿಗೆ ಸೇವಾ ಅವಧಿಯು 11 ತಿಂಗಳಾಗಿದ್ದು ಇವರ ಕಾರ್ಯಕ್ಷಮತೆ ಪರಿಶೀಲಿಸಿ ಹೊರಗುತ್ತಿಗೆ ಸೇವೆ ಮುಂದುವರೆಸುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ.
16) ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂದರ್ಭಿಕ ರಜೆ ಪಡೆಯಬಹುದು.
17) ಮಹಿಳಾ ಅಭ್ಯರ್ಥಿಗಳು Maternity Benefit Act 1961 ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.
18) ಆಯ್ಕೆಯಾದ ಅಭ್ಯರ್ಥಿಗಳು ತಾವು ನಿರ್ವಹಿಸುವ ಸ್ಥಳದಲ್ಲಿ ಅವ್ಯವಹಾರ ಅಥವಾ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಸಾಬೀತಾದಲ್ಲಿ ತಕ್ಷಣವೇ ಕೆಲಸದಿಂದ ತೆಗೆದುಹಾಕಲಾಗುವುದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.
19) ಭರ್ತಿಯಾದ ಹುದ್ದೆಗಳಲ್ಲಿ ಅನಿವಾರ್ಯ ಕಾರಣ ನಿಮಿತ್ತ ಖಾಲಿಯಾದಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿಯೇ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಸೇವೆ ಪಡೆಯಲಾಗುವುದು.
20) ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೇರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಖಾಲಿಯಾಗುವ ಈ ಹುದ್ದೆಗಳಿಗೆ ಆಯ್ಕೆಗೆ ಪರಿಗಣಿಸಲಾಗುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ, ಹಾವೇರಿ

**ಪ್ರತಿ :**

1. ಮಾನ್ಯ ನಿರ್ದೇಶಕರು (ಇ-ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾ ಮಟ್ಟದ ವಿವಿಧ ಸಂಪರ್ಕ ಇಲಾಖೆಗಳ ಮುಖ್ಯಸ್ಥರಿಗೆ ತಮ್ಮ ಕಾರ್ಯಾಲಯದ ಹಾಗೂ ತಮ್ಮ ಅಧೀನ ಬರುವ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಕೋರಿದೆ.
3. ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ಇವರಿಗೆ ತಮ್ಮ ಕಾರ್ಯಾಲಯದ ಹಾಗೂ ಅಧೀನ ಬರುವ ಗ್ರಾಮ ಪಂಚಾಯತಿಗಳ ಸೂಚನಾ ಫಲಕದಲ್ಲಿ ಪ್ರಚುರ ಪಡಿಸಲು ಸೂಚಿಸಿದೆ.
4. ರಕ್ಷಾ ಕಡತಕ್ಕೆ.